ಅಧಿಕಾರಿಗಳು

1 ಶ್ರೀ ಶಿವರಾಜ್ ಪಾಟೀಲ್, ಪ್ರಾ ಸಾ ಅ

2 ಶ್ರೀ ಬಿ ನಾಗರಾಜ್, ಖಜಾನೆ ಮತ್ತು ತೆರಿಗೆ ಅಧಿಕಾರಿ

ಸಿಬ್ಬಂದಿ ವರ್ಗದವರು

1 ಡಿ ಪಿ ರಾಮ, ದ್ವಿ ದ ಸ

2 ಶ್ರೀ ಮುರಳಿ ಬೋಳಾರ್ ಲೆಕ್ಕಾಧೀಕ್ಷಕರು

ಇವರಲ್ಲಿ ಶ್ರೀ ಶಿವರಾಜ್ ಪಾಟೀಲ್, ಪ್ರಾ ಸಾ ಅ, ಶ್ರೀ ಬಿ ನಾಗರಾಜ್, ಖಜಾನೆ ಮತ್ತು ತೆರಿಗೆ ಅಧಿಕಾರಿ ಹಾಗೂ ಶ್ರೀ ಮುರಳಿ ಬೋಳಾರ್, ಲೆಕ್ಕಾಧೀಕ್ಷಕರು ಇವರ ಅಮಾನತ್ತನ್ನು ತೆರವುಗೊಳಿಸಿ ಸಿಓಡಿಯಿಂದ ವಿಚಾರಣೆಯನ್ನು ಕಾಯ್ದಿರಿಸಿ ಪುನಃ ಸೇವೆಗೆ ನೇಮಿಸಿಕೊಳ್ಳಲಾಗಿದೆ

ಈ ಪ್ರಕರಣದ ಬಗ್ಗೆ ಸಿ ಓ ಡಿ ತನಿಖೆ ಪ್ರಗತಿಯಲ್ಲಿದೆ

ಚಿಕ್ಕಮಗಳೂರು ಜಿಲ್ಲೆಯಲ್ಲಿ 1999-2000 ಹಾಗೂ 2000-2001ನೇ ಸಾಲಿನಲ್ಲಿ ಕೆ ಎಸ್ ಆರ್ ಟಿ ಸಿ ಶೆಡ್ಯೂಲ್ಗಳ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 67(307)

ಸದಸ್ಯರ ಹೆಸರು ಶ್ರೀ ಕೆ ಬಿ ಮಲ್ಲಿಕಾರ್ಜುನ್(ಬೀರೂರು)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹ್ಮದ್(ಸಾರಿಗೆ ಸಚಿವರು)

ಪ್ರಶ್ನೆ

1) ಚಿಕ್ಕಮಗಳೂರು ಜಿಲ್ಲೆಯಲ್ಲಿ 1999-2000 ಹಾಗೂ 2000-2001ನೇ ಸಾಲಿನಲ್ಲಿ ಎಷ್ಟು ಕೆ ಎಸ್ ಆರ್ ಟಿ ಸಿ ಶೆಡ್ಯೂಲ್(ಮಾರ್ಗಗಳು) ಇದ್ದವು? (ವಿವರ ನೀಡುವುದು)

2) ಯಾವ ಯಾವ ಕಾರಣಗಳಿಂದ ಈ ಶೆಡ್ಯೂಲ್ಗಳನ್ನು ರದ್ದು ಪಡಿಸಲಾಗಿದೆ

3) ರದ್ದು ಪಡಿಸಿರುವ ಶೆಡ್ಯೂಲ್ಗಳ (ಮಾರ್ಗ) ವಿವರ ನೀಡುವುದು

4) ಮೇಲ್ಕಂಡ ಸಾಲುಗಳಲ್ಲಿ ಹೊಸದಾಗಿ ಪ್ರಾರಂಭಿಸಿದ ಮಾರ್ಗಗಳು ಯಾವುವು, ಅವುಗಳ ವಿವರ ನೀಡುವುದು?

ಉತ್ತರ

1) 1999-2000 158 ಅನುಸೂಚಿಗಳು

2000-2001 168 ಅನುಸೂಚಿಗಳು

(ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

2) ಅನುಸೂಚಿಗಳ ಆದಾಯ ಉತ್ತೇಜನಕಾರಿಯಾಗಿಲ್ಲದಿರುವುದರಿಂದ 2000-01ರಲ್ಲಿ ನಾಲ್ಕು ಅನುಸೂಚಿಗಳನ್ನು ರದ್ದುಪಡಿಸಲಾಗಿದೆ

3) 1999-2000ಕ್ಕೆ ಯಾವುದು ಇಲ್ಲಾ

2000-2001ಕ್ಕೆ

1) ಚಿಕ್ಕಮಗಳೂರು-ಬೆಂಗಳೂರು ವಯಾ ಪಂಚನಹಳ್ಳಿ

2) ಚಿಕ್ಕಮಗಳೂರು ಜಾವಗಲ್-ಅರಸೀಕೆರೆ

3) ಚಿಕ್ಕಮಗಳೂರು - ಗುಡ್ಡೇನಹಳ್ಳಿ

4) ಶಿವಮೊಗ್ಗ - ಗುಬ್ಬಿಹಳ್ಳಿ

4) 1999-2000

1) ಚಿಕ್ಕಮಗಳೂರು - ಬೆಂಗಳೂರು (ಡೀಲಕ್ಸ್)

2) ಚಿಕ್ಕಮಗಳೂರು - ಕಡೂರು

3) ಚಿಕ್ಕಮಗಳೂರು - ಮೂಡಿಗರೆ

2000-2001

1) ಚಿಕ್ಕಮಗಳೂರು - ಕಡೂರು

2) ಚಿಕ್ಕಮಗಳೂರು-ಕಡೂರು-ಮೈಸೂರು

3) ಚಿಕ್ಕಮಗಳೂರು-ಬೆಳಗಾಂ

4) ಚಿಕ್ಕಮಗಳೂರು-ಮಡಿಕೇರಿ

5) ಚಿಕ್ಕಮಗಳೂರು-ಬೀರೂರು(ಗ್ರಾಮೀಣ ಸಾರಿಗೆ)

6) ಚಿಕ್ಕಮಗಳೂರು-ಚಾವಗಲ್-ಬೀರೂರು

ಬೆಳ್ತಂಗಡಿ ತಾಲ್ಲೂಕಿನ ಅಗ್ನಿಶಾಮಕ ದಳ ಕಛೇರಿಗೆ ಕಟ್ಟಡ ಮಂಜೂರಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 68(212)

ಸದಸ್ಯರ ಹೆಸರು ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಪ್ರಶ್ನೆ

1) ಬೆಳ್ತಂಗಡಿ ತಾಲ್ಲೂಕಿನ ಅಗ್ನಿಶಾಮಕ ದಳ ಕಛೇರಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) 2002-03ನೇ ಸಾಲಿನಲ್ಲಿ ಸ್ವಂತ ಕಟ್ಟಡಕ್ಕೆ ಮಂಜೂರಾತಿ ನೀಡಲಾಗುವುದೇ?

3) ಅಗ್ನಿಶಾಮಕ ದಳದ ಇಲಾಖೆಯಲ್ಲಿ ನೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ವಸತಿ ಗೃಹಗಳ ಸೌಲಭ್ಯ ಇಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ?

ಉತ್ತರ

1) ಹೌದು

2) ಹಣಕಾಸಿನ ಲಭ್ಯತೆಗೊಳಪಟ್ಟು 2002-03ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು

3) ಅಗ್ನಿಶಾಮಕ ಸೇವಾ ಇಲಾಖೆಯ 610 ಸಿಬ್ಬಂದಿಗಳಿಗೆ ವಸತಿಗೃಹಗಳ ಸೌಲಭ್ಯವನ್ನು ವಿವಿಧ ಸ್ಥಳಗಳಲ್ಲಿ ಒದಗಿಸಲಾಗಿದೆ